ಆ. ಈ ವಿಷಯದಲ್ಲಿ ದಿನಾಂಕ : 22.01.2002ರಲ್ಲಿ ಸರ್ಕಾರಕ್ಕೆ ಬರೆದ ಮನವಿಯು ಈಗ ಯಾವ ಹಂತದಲ್ಲಿದೆ;

ಇ. ಕುಶಾವತಿ ನದಿ ನೀರಿಗೆ ಅಡ್ಡ ಕಟ್ಟೆ ಕಟ್ಟುವುದರಿಂದ ಹೆಚ್ಚಿನ ಪ್ರವಾಹದ ನೀರು ಮಳಾಗಾಲದಲ್ಲಿ ಅಡ್ಡಕಟ್ಟೆಯಲ್ಲಿ ನಿಲ್ಲುವುದರಿಂದ ಅಲ್ಲಿನ ಪ್ರದೇಶದ ರೈತರಿಗೆ ಅನುಕೂಲವಾಗುವುದಲ್ಲದೆ ಭೂಮಟ್ಟದಲ್ಲಿ ನೀರು ಹೆಚ್ಚಾಗಿ ಶೇಖರಗೊಳ್ಳುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ. ಮೇಲಿನ ಕಾರ್ಯಗಳ ಬಗ್ಗೆ ಸರ್ಕಾರ ತುರ್ತು ಕ್ರಮ ಏನಾದರೂ ಕೈಗೊಳ್ಳುತ್ತದೆಯೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಮತ್ತು ಸಣ್ಣ ನೀರಾವರಿ)

ಅ. ಬಂದಿದೆ.

ಆ. ಅನುದಾನದ ಕೊರತೆಯಿಂದ ಮನವಿಯಲ್ಲಿ ಕೋರಿದ ಕಾಮಗಾರಿಯನ್ನು ಕೈಗೊಳ್ಳಲು ಸಾಧ್ಯವಿಲ್ಲ.

ಇ. ಪ್ರಸ್ತುತ ಕುಶಾವತಿ ನದಿಗೆ ಅಡ್ಡಕಟ್ಟೆ ನಿರ್ಮಿಸಿ ನೀರು ನಿಲ್ಲಿಸುವ ಪ್ರಸ್ತಾವನೆ ಯಾವುದೂ ಇರುವುದಿಲ್ಲ.

ಈ. ಕೆಲವು ಸ್ಥಳದಲ್ಲಿ ಪ್ರವಾಹ ನಿಯಂತ್ರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದ್ದು, 2003-04ನೇ ಸಾಲಿನಲ್ಲಿ ಅನುದಾನದ ಲಭ್ಯತೆಯನ್ನು ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಬಾಗೇಪಲ್ಲಿಯಿಂದ ಉದುವಾರಪಲ್ಲಿಗೆ ಬಸ್ ಸೌಕರ್ಯ

129(172) ಶ್ರೀ ಚೌಡಾರೆಡ್ಡಿ (ಚಿಂತಾಮಣಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಾಗೇಪಲ್ಲಿಯಿಂದ ಊದುವಾರ ಪಲ್ಲಿಗೆ ಚಾಕವೆಲ್ ಮೂಲಕ ಡಾಂಬರೀಕರಣ ರಸ್ತೆ ಯಾಗಿದ್ದು, ಸಾರ್ವಜನಿಕರ ಹಿತದೃಷ್ಟಿಯಿಂದ ಊದುವಾರಪಲ್ಲಿಗೆ 10 ಗಂಟೆಗೆ ಬಸ್‌ಸೌಕರ್ಯ ಕಲ್ಪಿಸಿರುವುದು ನಿಜವೇ

ಆ. ಹಾಗಿದ್ದಲ್ಲಿ ಪ್ರಯಾಣಿಕರಿಗೆ ಅನುಕೂಲವಾಗುತ್ತಿದ್ದು ಬಸ್‌ಸೌಕರ್ಯವನ್ನು ಸ್ಥಗಿತಗೊಳಿಸಿವುದು ಸರಿಯೇ.

ಇ. ಬಸ್ ಸೌಕರ್ಯವನ್ನು ಪುನರಂಭ ಮಾಡಲು ಸರ್ಕಾರ ಏನಾದರೂ ಕ್ರಮ ಕೈಗೊಳ್ಳತ್ತದೆಯೇ?

ಶ್ರೀ .ಬಿ. ರಮಾನಾಥ್‌ರೈ (ಸಾರಿಗೆ ಸಚಿವರು)

ಅ. ಇಲ್ಲ

ಆ. ಉದ್ಭವಿಸುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ಕಾರ್ಕಳ ನಗರದ ಒಳಚರಂಡಿ ಯೋಜನೆ

130(198) ಶ್ರೀ ಗೋಪಾಲ ಭಂಡಾರಿ.ಹೆಚ್.(ಕಾರ್ಕಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?